# ಕಡೆಗೂ ಚಾಲ್ತಿಗೆ ವಾಟ್ಸ್‌ಆ್ಯಪ್ ಪೇಮೆಂಟ್




**ಮೊಬೈಲ್‌ನ ಜನಪ್ರಿಯ ತಂತ್ರಾಂಶಗಳಲ್ಲಿ 'ವಾಟ್ಸ್‌ಆ್ಯಪ್' ಮುಖ್ಯವಾದುದು. ಡಿಜಿಟಲ್ ಪಾವತಿಗೆ ಅವಕಾಶ ಕಲ್ಪಿಸುವ ಮೂಲಕ 'ವಾಟ್ಸ್‌ಆ್ಯಪ್' ಮತ್ತಷ್ಟು ಗ್ರಾಹಕಸ್ನೇಹಿಯಾಗಲು ಹೊರಟಿದೆ.**

■ **ಶಶಿಕುಮಾರ್ ಸಿ.**

ಡಿಜಿಟಲ್ ಪಾವತಿ ವ್ಯವಸ್ಥೆ ಆರಂಭಿಸಲು ಫೇಸ್‌ಬುಕ್ ಒಡೆತನದ 'ವಾಟ್ಸ್‌ಆ್ಯಪ್'ಗೆ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಸಿಪಿಐ) ಅನುಮೋದನೆ ನೀಡಿದೆ.

ದೇಶದೆಲ್ಲೆಡೆ ಡಿಜಿಟಲ್ ಪೇಮೆಂಟ್ಸ್‌ಗೆ ಉತ್ತೇಜನ ಸಿಕ್ಕಾಗಲೇ ತಾನೂ ಪಾವತಿ ವ್ಯವಸ್ಥೆಯನ್ನು ಆರಂಭಿಸುವುದಾಗಿ ವಾಟ್ಸ್‌ಆ್ಯಪ್ ಹೇಳಿಕೊಂಡಿತ್ತು. ಕಳೆದೆರಡು ಮೂರು ವರ್ಷಗಳಿಂದ ಪಾವತಿ ವ್ಯವಸ್ಥೆ ಬಗ್ಗೆ ಗಮನಹರಿಸಿದ್ದ ವಾಟ್ಸ್‌ಆ್ಯಪ್ ಕಡೆಗೂ ಆ ಸವಲತ್ತನ್ನು ತನ್ನ ಬಳಕೆದಾರರಿಗೆ ಒದಗಿಸಿದೆ.

ಸಂದೇಶ, ಫೋಟೊ ಹಾಗೂ ವಿಡಿಯೊ ವಿನಿಮಯಕ್ಕಾಗಿ ಬಳಕೆಯಾಗುತ್ತಿರುವ ವಾಟ್ಸ್‌ಆ್ಯಪ್ ಇನ್ನುಮುಂದೆ ಪೇಮೆಂಟ್ ಮಾಡಲು ಅಥವಾ ಹಣ ಪಾವತಿ ಮಾಡಲೂ ಬಳಸಬಹುದಾಗಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್ ವರ್ಷನ್ ಸ್ಮಾರ್ಟ್‌ಫೋನ್‌ಗಳಲ್ಲಿ ಈ ಸೌಲಭ್ಯವಿದೆ.

### ಕಾರ್ಯನಿರ್ವಹಣೆ ಹೇಗೆ?

'ಯುಪಿಐ' (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಆಧಾರದ ಮೇಲೆ ಗೂಗಲ್ ಪೇ, ಪೇಟಿಎಂ ಹಾಗೂ ಫೋನ್‌ಪೇ ಕಾರ್ಯನಿರ್ವಹಿಸುವಂತೆ ವಾಟ್ಸ್‌ಆ್ಯಪ್ ಪೇ ಸಹ ಕಾರ್ಯನಿರ್ವಹಿಸಲಿದೆ. ಅದಕ್ಕಾಗಿ ಬಳಕೆದಾರರು ತಮ್ಮ ಬ್ಯಾಂಕ್ ಖಾತೆ ಜತೆ ವಾಟ್ಸ್‌ಆ್ಯಪ್ ಪೇ ಅನ್ನು ಲಿಂಕ್ ಮಾಡುವ ಮೂಲಕ ಹಣ ವರ್ಗಾವಣೆ ಅಥವಾ ಪಾವತಿ ಕಾರ್ಯವನ್ನು ಮಾಡಬಹುದಾಗಿದೆ.

### ಪಾವತಿ / ವರ್ಗಾವಣೆ ವಿಧಾನ ಹೇಗೆ?

- ವಾಟ್ಸ್‌ಆ್ಯಪ್ ಅನ್ನು ತೆರೆದು ಮೇಲ್ಭಾಗದಲ್ಲಿ ಕಾಣುವ ಮೂರು ಚುಕ್ಕೆಗಳ ಮೆನು ಕ್ಲಿಕ್ಕಿಸಿದರೆ ಪೇಮೆಂಟ್ಸ್ ಆಯ್ಕೆ ಲಭ್ಯವಾಗುತ್ತದೆ. ಅದನ್ನು ಕ್ಲಿಕ್ಕಿಸಬೇಕು.
- ನಂತರ ಕಾಣುವ 'ಆ್ಯಡ್ ಪೇಮೆಂಟ್ ಮೆಥೆಡ್' ಅನ್ನು ಕ್ಲಿಕ್ಕಿಸಿದರೆ ಬ್ಯಾಂಕ್‌ಗಳ ವಿವರ ಲಭ್ಯವಾಗುತ್ತದೆ.
- ಆ ಪೈಕಿ ಬಳಕೆದಾರರ ಬ್ಯಾಂಕ್ ಹೆಸರನ್ನು ಕ್ಲಿಕ್ಕಿಸಬೇಕು. ಹಾಗೇ ಕ್ಲಿಕ್ಕಿಸುವಾಗ ನಿಮ್ಮ ವಾಟ್ಸ್‌ಆ್ಯಪ್ ಮೊಬೈಲ್ ಸಂಖ್ಯೆ ಹಾಗೂ ಬ್ಯಾಂಕಿಗೆ ನೀಡಿರುವ ಮೊಬೈಲ್ ಸಂಖ್ಯೆ ಒಂದೇ ಆಗಿರಬೇಕು. ಆಗ ಮಾತ್ರ ಬ್ಯಾಂಕ್ ಖಾತೆಯೊಂದಿಗೆ ವಾಟ್ಸ್‌ಆ್ಯಪ್ ಪಾವತಿ ವ್ಯವಸ್ಥೆಯನ್ನು ಲಿಂಕ್ ಮಾಡಲು ಸಾಧ್ಯ.
- ಬ್ಯಾಂಕ್ ಖಾತೆ ಲಿಂಕ್ ಆಗಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು.
- ಯಾವ ವ್ಯಕ್ತಿಯ ಖಾತೆಗೆ ಹಣ ವರ್ಗಾಯಿಸಬೇಕೋ ಆ ವ್ಯಕ್ತಿಯೂ ವಾಟ್ಸ್‌ಆ್ಯಪ್ ಪೇ ಬಳಕೆದಾರ ಆಗಿರಬೇಕು. ಇಲ್ಲವಾದರೆ ಪಾವತಿ ಅಸಾಧ್ಯ.
- ವಾಟ್ಸ್‌ಆ್ಯಪ್‌ನಲ್ಲಿ ಆ ವ್ಯಕ್ತಿಯ ಚಾಟ್ ಲಿಸ್ಟ್‌ಗೆ ತೆರಳಬೇಕು.
- ಸೆಂಡಿಂಗ್ ಆಪ್ಷನ್‌ನಲ್ಲಿರುವ ಅಟ್ಯಾಚ್‌ಮೆಂಟ್ ಆಯ್ಕೆ ಮೇಲೆ ಕ್ಲಿಕ್ ಮಾಡಬೇಕು.
- ಅಲ್ಲಿ 'ಪೇಮೆಂಟ್' ಆಯ್ಕೆ ಮಾಡಿಕೊಂಡರೆ ನಂತರ ಯುಪಿಐ ಪಿನ್ ಮೂಲಕ ಹಣ ವರ್ಗಾವಣೆ ಮಾಡಬಹುದು.
- ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಎಸ್‌ಬಿಐ ಮತ್ತು ಜಿಯೊ ಪೇಮೆಂಟ್ಸ್ ಬ್ಯಾಂಕ್ ಜೊತೆ ಸೇರಿ ಕಾರ್ಯ ನಿರ್ವಹಿಸುತ್ತಿರುವುದಾಗಿ ವಾಟ್ಸ್‌ಆ್ಯಪ್ ಹೇಳಿದೆ.

**ಯುಪಿಐ ಪಾವತಿ ಹೆಚ್ಚಳ:** ದೇಶದಲ್ಲಿ ಅಕ್ಟೋಬರ್‌ನಲ್ಲಿ ಯುಪಿಐ ಪಾವತಿ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದ್ದು, 207 ಕೋಟಿ ರೂಪಾಯಿಯಷ್ಟು ಪಾವತಿ ನಡೆದಿದೆ. ಸೆಪ್ಟೆಂಬರ್‌ನಲ್ಲಿ ಇದು 180 ಕೋಟಿ ರೂಪಾಯಿ ಆಗಿತ್ತು. ಸದ್ಯ ವಾಟ್ಸ್‌ಆ್ಯಪ್‌ಗೆ ಭಾರತದಲ್ಲಿ 40 ಕೋಟಿ ಬಳಕೆದಾರರಿದ್ದಾರೆ.

**ಮಿತಿ ಮತ್ತು ಶುಲ್ಕಗಳು:** ಯುಪಿಐ ವಹಿವಾಟಿಗೆ ಇರುವ 1 ಲಕ್ಷ ರೂಪಾಯಿ ಮಿತಿ 'ವಾಟ್ಸ್‌ಆ್ಯಪ್ ಪೇ'ಗೂ ಅನ್ವಯಿಸುತ್ತದೆ. ಇನ್ನು ಈ ಯುಪಿಐ ಸೇವೆಯು ಉಚಿತ ಸೇವೆಯಾಗಿದ್ದು, ಅದರ ಯಾವುದೇ ವ್ಯವಹಾರಗಳಿಗೆ ಶುಲ್ಕ ಇರುವುದಿಲ್ಲ. ಕೆಲವು ಯುಪಿಐ ಅಪ್ಲಿಕೇಷನ್‌ಗಳು ಜನರಿಗೆ ಅವರ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಕೋಡ್ ಅನ್ನು ನಮೂದಿಸುವ ಮೂಲಕ ಹಣವನ್ನು ಕಳುಹಿಸಲು ನಿಮಗೆ ಅನುಮತಿಸುತ್ತವೆ. ಈ ವಿಶೇಷ ಸೌಲಭ್ಯವನ್ನು ವಾಟ್ಸ್‌ಆ್ಯಪ್‌ನಲ್ಲಿ ಇನ್ನೂ ಸಕ್ರಿಯಗೊಳಿಸಲಾಗಿಲ್ಲ. ■

